VIJAYAKUMAR KANNUR
Digitally signed by VIJAYAKUMAR KANNUR
Date: 2025.07.08 10:57:06 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 05.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್ ಎಸ್ ಹೆಚ್.ವಕೀಲರಿಂದ**

ಆರೋಪಿ ನನ್ನ ಸಂಬಂದಧಿಯಾಗಬೇಕು ಎಂದರೆ ಸರಿ. ನಾನು ವ್ಯವಸಾಯ ಮತ್ತು ಶಾಲೆಯಲ್ಲಿ ಕೆಲಸವನ್ನು ಸಹ ಮಾಡುತ್ತೇನೆ. ನಮ್ಮದು ಜಂಟಿ ಕುಟುಂಬ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿಯನ್ನು ಸಹ ಮಾಡುತ್ತೇನೆ. ನಾನು ಆರೋಪಿಗೆ 2023 ರಲ್ಲಿ ಹಣ ನೀಡಿದ ಬಗ್ಗೆ ನನ್ನ ಆದಾಯ ತೆರಿಗೆಯ ದಾಖಲೆಗಳಲ್ಲಿ ಘೋಷಿಸಿಕೊಂಡಿರುವುದಿಲ್ಲ. ಆರೋಪಿಯ ಕುಟುಂಬ ಸಹ ಅವಿಭಕ್ತ ಕುಟುಂಬ ಆಗಿರುವುದು ಎಂದರೆ ಸರಿ. ಆರೋಪಿಯು ನವೀನ್ ಗಾರಮೆಂಟ್ಸ್ ಎಂಬ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿರುವುದಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡಿರುವುದಿಲ್ಲ. ಆರೋಪಿಯ ಬಟ್ಟೆ ಅಂಗಡಿಯ ವ್ಯಾಪಾರಕ್ಕೆ ಹಣದ ಅಡಚಣೆ ಇರುವುದಾಗಿ ಎಂದು ಹೇಳಿದಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಪರಿಶೀಲಿಸಿ ಖಚಿತ ಪಡಿಸಿಕೊಂಡಿರುವುದಿಲ್ಲ.

2. ಆರೋಪಿ ಹಣ ಪಡೆದಿರುವ ಬಗ್ಗೆ ಹಿರಿಯರ ಸಮಕ್ಷಮದಲ್ಲಿ ಮಾತುಕತೆ ಆದ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇರುವುದಿಲ್ಲ, ಆದರೆ ಆರೋಪಿ ದಾಖಲೆಯನ್ನು ಬರೆದುಕೊಟ್ಟಿರುವನು. ಆರೋಪಿ ಬಾಕಿ ಉಳಿದಿರುವ ಹಣಕ್ಕೆ ಸಂಬಂಧಪಟ್ಟಂತೆ ಈ ಚೆಕ್ ನ್ನು ಕೊಟ್ಟು ಹೋಗಿರುವನು. 2023 ರಲ್ಲಿ ಈ ಮಾತುಕತೆ ಆಗಿರುವುದು. ಜೂನ್ 2023 ರಲ್ಲಿ ಆರೋಪಿ ದಾಖಲೆ ಬರೆದುಕೊಟ್ಟಿರುವನು. ಈ ಸಂಗತಿ ನನ್ನ ದೂರಿನಲ್ಲಿ ಮತ್ತು ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಈ ದಾಖಲೆಯನ್ನು ಆರೋಪಿ ಬರೆದುಕೊಟ್ಟಿರುವುದಾಗಿ ಎಂದು ಹೇಳಿ ನಾನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿಪಿ 1 ರ ಚೆಕ್ ನ ಮೊತ್ತವು ನನ್ನ ಮತ್ತು ನನ್ನ ಹೆಂಡತಿಯಾದ ಪ್ರತಿಭಾ ಪಾಟೀಲ್ ಗೆ ಸಂಬಂಧಪಟ್ಟಂತೆ ನೀಡಬೇಕಾಗಿರುವ ಮೊತ್ತವಾಗಿರುವುದು. ಆರೋಪಿಗೆ ಹಣ ನೀಡಿದ ಬಗ್ಗೆ

ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಖಾತೆಗೆ ನಾವು ಹಣ ವರ್ಗಾವಣೆ ಮಾಡಿರುವೆವು. ದಿಃ 15.02.2023 ರಿಂದ 31.03.2023 ರ ವರೆಗೆ ಆರೋಪಿಯ ಬ್ಯಾಂಕ್ ಖಾತೆಗೆ ಸಾಲದ ರೂಪದಲ್ಲಿ ಹಣ ವರ್ಗಾವಣೆ ಮಾಡಿದಾಗಿ ಎಂದು ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಈ ದೂರಿನಲ್ಲಿ ಹೇಳಿರುವಂತೆ ದಿಃ 08.05.2023 ರಿಂದ 16.06.2023 ರವರೆಗೆ ನಗದು ರೂಪದಲ್ಲಿಯೂ ಸಹ ನಾನು ಹಣ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿದ ಬಗ್ಗೆ ಪಾವತಿಯನ್ನು ಆತನ ಕಡೆಯಿಂದ ಬರೆಸಿಕೊಂಡಿರುವುದಿಲ್ಲ, ಏಕೆಂದರೆ ಆತ ನನ್ನ ಸಂಬಂಧಿಯಾಗಿರುವುದರಿಂದ . ಆರೋಪಿಗೆ ರೂ.16 ಲಕ್ಷ 90 ಸಾವಿರ ಹಣ ನಗದು ರೂಪದಲ್ಲಿ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ರೂ. 3 ಲಕ್ಷ 20 ಸಾವಿರ ಹಣ ಕೈಗಡ ರೂಪದಲ್ಲಿ ಕೇಳಿರುವುದರಿಂದ ಆತನ ಬ್ಯಾಂಕ್ ಖಾತೆಯ ಮೂಲಕ ನನಗೆ ವರ್ಗಾವಣೆ ಮಾಡಿರುವನು ಎಂದರೆ ಸರಿಯಲ್ಲ. ಈ ಹಣ ಆರೋಪಿ ನನ್ನ ಕಡೆಯಿಂದ ಪಡೆದಿರುವ ಸಾಲದ ಹಣದ ಮರುಪಾವತಿಗಾಗಿ ವರ್ಗಾವಣೆ ಮಾಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಆರೋಪಿ ತಾನು ಪಡೆದಿರುವ ಸಾಲದ ಹಣದ ಮರುಪಾವತಿಗಾಗಿ 28 ಲಕ್ಷ 80 ಸಾವಿರ ಹಣದ ಚೆಕ್ ನ್ನು ನೀಡಿರುವುದಾಗಿ ಎಂದು ನಾನು ಸುಳ್ಳು ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

4.ಸದರಿ ಚೆಕ್ ನ್ನು ನಗಧೀಕರಣಕ್ಕಾಗಿ ಬ್ಯಾಂಕ್ ಗೆ ಹಾಜರು ಪಡಿಸಿದಾಗ ಕರ್ನಾಟಕ ಬ್ಯಾಂಕ್ ಮುಧೋಳ ಶಾಖೆ ಇವರು ನಿಪಿ 2 ರಂತೆ ಹಿಂಬರಹ ನೀಡಿರುವರು ಎಂದರೆ ಸರಿಯಲ್ಲ. ನಿಪಿ 3 ರ ನೋಟಿಸ್ ಗೆ ಆರೋಪಿ ನಿಪಿ 6 ರಂತೆ ಪ್ರತ್ಯುತ್ತರ ನೀಡಿರುವನು ಎಂದರೆ ಸರಿ. ನಾನೇ ಆರೋಪಿಗೆ ಕೈಗಡ ರೂಪದ ಸಾಲದ ಹಣ ಮರಳಿ ನೀಡಬೇಕಾಗಿದ್ದರೂ ಸಹಿತ ಆತನ ವಿರುದ್ಧ ಈ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಂಬಂಧಿಯಾದ್ದರಿಂದ ನನ್ನ ವಿರುದ್ಧ ಆತ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿಯ ಖಾತೆಯಿಂದ ಎಷ್ಟು ಹಣ ಆರೋಪಿಯ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ಪ್ರತ್ಯೇಕವಾದ statement ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಹಾಜರು ಪಡಿಸಿದ್ದೇನೆ ಎಂದು ನುಡಿಯುವರು.

5. ನಿಪಿ 3 ರ ನೋಟಿಸ್ ನಲ್ಲಿ ನನ್ನ ಹೆಂಡತಿಯ ಪರವಾಗಿ ಅಧಿಕಾರಪಡೆದುಕೊಂಡು ನೋಟಿಸ್

ನೀಡಿರುವುದಾಗಿ ಎಂದು ಕಾಣಿಸಿಲ್ಲ ಎಂದರೆ ಸರಿ. ಆ ನೋಟಿಸ್ ನಲ್ಲಿ ನನ್ನದು ಮತ್ತು ನನ್ನ ಹೆಂಡತಿಯದು ಎಷ್ಟು ಹಣ ಆರೋಪಿಗೆ ನೀಡಿರುವುದಾಗಿ ಎಂದು ಪ್ರತ್ಯೇಕವಾಗಿ ಕಾಣಿಸಿರುವುದಿಲ್ಲ ಎಂದರೆ ಸರಿ. ಆರೋಪಿ ಜಂಟಿ ಸಾಲದ ಮರುಪಾವತಿಗಾಗಿ ಈ ಚೆಕ್ ನು ನೀಡಿರುವುದಾಗಿ ಎಂದು ಆರೋಪಿ ಯ ಕಡೆಯಿಂದ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ. ಸಾಮಾನ್ಯವಾಗಿ ಸಾಲವನ್ನು ನೀಡಬೇಕಾದರೆ ಆ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ನೀಡಬೇಕಾಗುತ್ತದೆ ಎಂದರೆ ಸರಿ. ಆರೋಪಿಯ ಕುಟುಂಬದ ಹೆಸರಿನಲ್ಲಿ ಜಮೀನು ಮತ್ತು ಮನೆ ಆಸ್ತಿಗಳು ಇರುವವು ಎಂದರೆ ಸರಿ. ಆರೋಪಿಯ ಆರ್ಥಿಕ ಪರಿಸ್ಥಿತಿ ಸ್ಥಿತಿವಂತನಾಗಿರುವನು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಆರೋಪಿ ತನ್ನ ವ್ಯಾಪರಕ್ಕೆ ಹಣದ ಅವಶ್ಯಕತೆ ಇರುವುದಾಗಿ ಎಂದು ಹೇಳಿ ಹಣ ಪಡೆದಿರುವನು ಎಂದು ನುಡಿಯುವರು. ಆರೋಪಿಗೆ 15 ಲಕ್ಷ 10 ಸಾವಿರ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ನನಗೆ ಯಾವುದೇ ಅಧಿಕಾರ ಪತ್ರ ನೀಡದೇ ಇದ್ದರೂ ಸಹಿತ ನಾನು ಈ ಖೊಟ್ಟಿ ದೂರು ದಾಖ್ಲು ಮಾಡಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಕೊನೆಯದಾಗಿ 2024 ರಲ್ಲಿ ಚೆಕ್ ನೀಡುವ ಸಮಯದಲ್ಲಿ ಭೇಟಿಯಾಗಿರುವೆವು. ಆರೋಪಿ ನಿಪಿ 1 ರ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿನ ನಮೂದು ಮಾಡಿರುವ ದಿನಾಂಕ ಮತ್ತು ಮೊತ್ತವನ್ನು ನಾನೇ ಬರೆದಿರುವೆನು ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣ ನೀಡಿರುವುದಿಲ್ಲ ಆದರೂ ಸಹಿತ ಈ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.08 10:57:13 +0530